ದಿನಾಂಕಃ 10-04-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ **7** ರಿಂದ **12** ನೇ ಪ್ರತಿವಾದಿಗಳ ಪರ ಶ್ರೀ ಪಿ ಎಸ್ ಎನ್ ವಕೀಲರಿಂದಃ

1. ನನ್ನ ತವರು ಮನೆ ಕುಟುಂಬದ ಮೂಲ ಪುರುಷ ಬಸಪ್ಪ ಎಂದರೆ ಸರಿ. ಅವರಿಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ, ಶಿವನಗೌಡ, ಫಕೀರಗೌಡ ಮತ್ತು ನಾನು. ಅವರಲ್ಲಿ ಶಿವನಗೌಡ ತೀರಿಕೊಂಡಿದ್ದಾರೆ. ಶಿವನಗೌಡ ಹೆಂಡತಿ ಮತ್ತು ಮಕ್ಕಳು ಪ್ರತಿವಾದಿ ನಂಬರ 5, 7 ರಿಂದ 10 ಎಂದರೆ ಸರಿ. ಫಕೀರಗೌಡನ ಹೆಂಡತಿ 6 ನೇ ಪ್ರತಿವಾದಿ ಸುಮಾ. ಅವರಿಗೆ ಮೂರು ಜನ ಮಕ್ಕಳು. ಅವರೆಂದರೆ, 2 ನೇ ವಾದಿ ಮತ್ತು 11 ಮತ್ತು 12 ನೇ ಪ್ರತಿವಾದಿಗಳು.

2. ನನ್ನ ತಂದೆ ತೀರಿಕೊಂಡು 30 ವರ್ಷಗಳಾಗಿವೆ. ಅವರು ತೀರಿಕೊಳ್ಳುವ ಸಮಯದಲ್ಲಿ ಕುಟುಂಬದಲ್ಲಿ ಹಿಸ್ಸಾ ಆಗಿತ್ತಾ ಎಂದರೆ ಇಲ್ಲ. ಬಸಪ್ಪನ ಕಾಲದಲ್ಲಿ ನನ್ನ ಶಿವನಗೌಡ ಮತ್ತು ಪಕೀರಗೌಡನ ಮಧ್ಯೆ ಹಿಸ್ಸಾ ಕೋರಿ ದಾವಾ ಸಲ್ಲಿಸಲಾಗಿತ್ತಾ ಎಂದರೆ ಇಲ್ಲ. ಹಿಸ್ಸಾ ಈ ದಾವಾ ಮಾತ್ರ ಸಲ್ಲಿಸಿದ್ದೇವೆ ಎಂದರೆ ಸರಿ. ಬಸಪ್ಪ ತೀರಿಕೊಂಡ ನಂತರ ನನ್ನ, ಫಕ್ಕೀರಪ್ಪ ಮತ್ತು ಶಿವನಗೌಡ ಅವರ ಮಕ್ಕಳು ನಡುವೆ ಹಿಸ್ಸಾ ಆಗಿತ್ತಾ ಎಂದರೆ ಇಲ್ಲ. Counter Claim Schedule ಆಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ತಂದೆಯ ಮನೆತನ ಶ್ರೀಮಂತ ಮನೆತನ ಎಂದರೆ ಸರಿ. ಬಸಪ್ಪ ಇದ್ದಾಗ ಮತ್ತು ತೀರಿಕೊಂಡ ನಂತರ ಆತನ ಮಕ್ಕಳಿಗೆ ಯಾವುದೇ ಆರ್ಥಿಕ ತೊಂದರೆ ಇರಲಿಲ್ಲ ಎಂದರೆ ಸರಿ. ಬಸಪ್ಪ ತೀರಿಕೊಂಡ ನಂತರ ಶಿವನಗೌಡ ಹಾಗೂ ಫಕೀರಪ್ಪನ ಮಕ್ಕಳು ಹಕ್ಕು ಬಿಟ್ಟು ಕೊಟ್ಟಿದ್ದಾರಾ ಎಂದರೆ ಇಲ್ಲ. ಶಿವನಗೌಡ ಹಾಗೂ ಫಕೀರಗೌಡ ನಿಮ್ಮ ಒಪ್ಪಿಗೆಯಿಂದ ವರದಿ ಕೊಟ್ಟು ಖಾತಾ ಮಾಡಿಸಿಕೊಂಡಿದ್ದಾರಾ ಎಂದರೆ ಇಲ್ಲ. ಅವರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಮಾಲ್ಕಿ ಹಕ್ಕು ಇತ್ತಾ ಎಂದರೆ ಇರಲಿಲ್ಲ. ದಿಃ 21-11-2018 ಮತ್ತು 18-02-2019 ರ ಕ್ರಯ ಪತ್ರದಲ್ಲಿ ಬಂದ ಹಣ ಕುಟುಂಬದ ಅವಶ್ಯಕತೆಗೆ ಉಪಯೋಗಿಸಿದ್ದಾರಾ ಎಂದರೆ ಇಲ್ಲ. ಆಸ್ತಿ ಮಾರಾಟ ಮಾಡಿದ್ದರು ಸಹ ಇಂದಿಗೂ ಆಸ್ತಿ ನನ್ನ, ಫಕೀರಗೌಡ ಹಾಗೂ ಆತನ ಮಕ್ಕಳು ಶಿವನಗೌಡನ ಮಕ್ಕಳ ಸ್ವಾಧೀನದಲ್ಲಿದೆ. 1 ಮತ್ತು 2 ನೇ ಪ್ರತಿವಾದಿಗಳು ಎಂದಾದರೂ ಕ್ರಯದ ಸ್ವತ್ತಿನ ಸ್ವಾಧೀನದಲ್ಲಿದ್ದಾರಾ ಎಂದರೆ ಇಲ್ಲ.

3. ಪ್ರತಿವಾದಿ 7 ರಿಂದ 12 ಅವರಿಗೆ ದಾವಾ ಸ್ವತ್ತಿನಲ್ಲಿ ಸಮಾನವಾದ ಹಿಸ್ಸಾ ಇದೆ ಎಂದರೆ ಸರಿ. 13 ನೇ ಪ್ರತಿವಾದಿ ಬಕ್ಸೀಸ್ ಪತ್ರದ ಸಾಗುವಳಿ ಮಾಡುತ್ತಿದ್ದಾರಾ ಎಂದರೆ ಇಲ್ಲ. ಮಾರಾಟ

ಮಾಡಿದ ಸ್ವತ್ತುಗಳಲ್ಲಿ ಬಸಪ್ಪನ ವಾರಸುದಾರರಾದ ನನಗೆ ಶಿವನಗೌಡನ ಹೆಂಡತಿ ಹಾಗೂ ಮಕ್ಕಳಿಗೆ ಫಕೀರಪ್ಪನ ಹೆಂಡತಿ ಹಾಗೂ ಮಕ್ಕಳಿಗೆ ಸಮಾನವಾದ ಹಿಸ್ಸಾ ಇದೆ ಎಂದರೆ ಸರಿ. ಖರೀದಿ ಪತ್ರದಲ್ಲಿ ಶಿವನಗೌಡ ಹಾಗೂ ಫಕೀರಗೌಡನ ಮಕ್ಕಳ ಸಹಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.